Volume: 4 Issue: 10 Pages: 124-127




# ೧೯೪೮ರ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಹಾತ್ಮ ಗಾಂಧೀಯವರ ಬಗ್ಗೆ ಗಣ್ಯರಿಂದ ಸಂತಾಪ ಸೂಚಕ ನಿರ್ಣಯಗಳ ತುಣುಕುಗಳು

**[*1] ಡಾ. ಸುಂದ್ರೇಶ ಎನ್**

[*1] ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು,ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು, ಮೈಸೂರು, ಕರ್ನಾಟಕ, ಭಾರತ

## Article Info.

**E-ISSN:** 2583-6528
**Impact Factor (SJIF):** 6.876
**Peer Reviewed Journal**
**Available online:**
www.alladvancejournal.com

**Received:** 21/Sep/2025
**Accepted:** 20/Oct/2025

***Corresponding Author**
**ಡಾ. ಸುಂದ್ರೇಶ ಎನ್**
ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು,ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು, ಮೈಸೂರು, ಕರ್ನಾಟಕ, ಭಾರತ

## Abstract

ನನ್ನ ಲೇಖನದ ಉದ್ದೇಶ ಪ್ರಜಾಪ್ರತಿನಿಧಿಯಂತಹ ಪ್ರತಿಷ್ಟಿತ ವೇದಿಕೆಯಲ್ಲಿ ಗಣ್ಯರು ಮಹಾತ್ಮ ಗಾಂಧೀಯವರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಮತ್ತು ಅವರ ಪ್ರಭಾವ ಮೈಸೂರು ಅಲ್ಲದೇ ದೇಶ ವಿದೇಶಗಳಲ್ಲಿ ಎಲ್ಲಾ ವರ್ಗಗಳಲ್ಲಿ ಅಂದರೆ ಸ್ತ್ರೀರಯರು, ಪುರುಷರು, ಹಿರಿಯರು, ಕಿರಿಯರು ಎನ್ನದೆ ಎಲ್ಲಾ ವರ್ಗಗಳಿಗೆ ಅವರು ಬೀರಿದ್ದ ಪ್ರಭಾವ ಇದರಿಂದ ಅಂದಿನ ಸಮಕಾಲೀನ ಜಗತ್ತಿನ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪರಿಣಾಮವನ್ನು ಮನಗಾಣಲು ಸಾಧ್ಯವಾಗುತ್ತದೆ. ಸಮಕಾಲೀನ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಅವರು ಬೀರಿದ ಪ್ರಭಾವವನ್ನು, ಸಮಾಜದಲ್ಲಿ ಸ್ತ್ರೀರ ಸಮಾನತೆ, ಹರಿಜನೋದ್ಧಾರ, ಸಮ-ಸಮಾಜದ ಕಲ್ಪನೆ, ಸತ್ಯ ಮತ್ತು ಅಹಿಂಸೆಯೆAಬ ಪ್ರಚಂಡ ಆಯುಧಗಳು ಹೇಗೆ ಪರಿಣಾಮ ಬೀರಿದವು ಮತ್ತು ದೇಶದ ಮೂಲೆ ಮೂಲೆಯಲ್ಲಿಯೂ ಅವರ ಬಗ್ಗೆ ಇದ್ದ ನೈಜ ಭಾವನೆಗಳನ್ನು ಈ ಭಾಷಣದಲ್ಲಿ ಗಮನಿಸಿ ಕೆಲವು ಪ್ರಮುಖ ತುಣುಕುಗಳನ್ನು ಮಾತ್ರ ತಿಳಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

**Keywords:** ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್, ಕೆಂಗಲ್ ಹನುಂತಯ್ಯನವರ ಭಾಷಣಗಳ ತುಣುಕು

## Introduction

ಪ್ರಜಾಪ್ರತಿನಿಧಿ ಸಭೆಯು ಏಷ್ಯಾ ಖಂಡದಲ್ಲೇ ಮೊಟ್ಟಮೊದಲ ಬಾರಿಗೆ ಸರ್ಕಾರ ಮತ್ತು ಪ್ರಜೆಗಳ ನಡುವೆ ಏರ್ಪಟ್ಟ ಕಂದಕಗಳನ್ನು ಹೋಗಲಾಡಿಸಲು ಮತ್ತು ಆಡಳಿತ ವಿಷಯಗಳಲ್ಲಿ ಅಧಿಕಾರೇತರಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ಸ್ಥಾಪಿಸಿದ ಮೊದಲ ವೇದಿಕೆ ಎಂದರೇ ತಪ್ಪಾಗಲಾರದು. ಈ ವೇದಿಕೆಯ ಮುಖ್ಯ ಉದ್ದೇಶ ರೈತರು, ವರ್ತಕರು ಮತ್ತು ಇತರ ಪ್ರತಿನಿಧಿಗಳಿಂದ ಕೂಡಿದ್ದ ಒಂದು ಸಭೆ ನಡೆಸಿ ಎಲ್ಲರೂ ಒಂದು ಚೌಕಟ್ಟಿನಲ್ಲಿ ಸಾರ್ವಜನಿಕ ವಿಷಯಗಳನ್ನು ಚರ್ಚಿಸುವುದು ಮತ್ತು ಆಡಳಿತ ವಿಷಯದಲ್ಲಿ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಇಂತಹ ಪ್ರಜಾಪ್ರತಿನಿಧಿಯಂತಹ ದೊಡ್ಡ ಸಭೆಯಲ್ಲಿ ಗಣ್ಯಾತಿಗಣ್ಯರಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಯವರ ನಿಧನದ ಸಂತಾಪ ಸೂಚಿಸಲಾಯಿತು. ನನ್ನ ಲೇಖನದ ಉದ್ದೇಶ ಪ್ರಜಾಪ್ರತಿನಿಧಿಯಂತಹ ಪ್ರತಿಷ್ಟಿತ ವೇದಿಕೆಯಲ್ಲಿ ಗಣ್ಯರು ಮಹಾತ್ಮ ಗಾಂಧೀಯವರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಮತ್ತು ಅವರ ಪ್ರಭಾವ ಮೈಸೂರು ಅಲ್ಲದೇ ದೇಶ ವಿದೇಶಗಳಲ್ಲಿ ಎಲ್ಲಾ ವರ್ಗಗಳಲ್ಲಿ ಅಂದರೆ ಸ್ತ್ರೀರಯರು, ಪುರುಷರು, ಹಿರಿಯರು, ಕಿರಿಯರು ಎನ್ನದೆ ಎಲ್ಲಾ ವರ್ಗಗಳಿಗೆ ಅವರು ಬೀರಿದ್ದ ಪ್ರಭಾವ ಇದರಿಂದ ಅಂದಿನ ಸಮಕಾಲೀನ ಜಗತ್ತಿನ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪರಿಣಾಮವನ್ನು ಮನಗಾಣಲು ಸಾಧ್ಯವಾಗುತ್ತದೆ. ಸಮಕಾಲೀನ ಸಮಾಜ ಮತ್ತು ಸಂಸ್ಕೃತಿಯ ಮೇಲೆ ಅವರು ಬೀರಿದ ಪ್ರಭಾವವನ್ನು, ಸಮಾಜದಲ್ಲಿ ಸ್ತ್ರೀರ ಸಮಾನತೆ, ಹರಿಜನೋದ್ಧಾರ, ಸಮ-ಸಮಾಜದ ಕಲ್ಪನೆ, ಸತ್ಯ ಮತ್ತು ಅಹಿಂಸೆಯೆಅಬ ಪ್ರಚಂಡ ಆಯುಧಗಳು ಹೇಗೆ ಪರಿಣಾಮ ಬೀರಿದವು ಮತ್ತು ದೇಶದ ಮೂಲೆ ಮೂಲೆಯಲ್ಲಿಯೂ ಅವರ ಬಗ್ಗೆ ಇದ್ದ ನೈಜ ಭಾವನೆಗಳನ್ನು ಈ ಭಾಷಣದಲ್ಲಿ ಗಮನಿಸಿ ಕೆಲವು ಪ್ರಮುಖ ತುಣುಕುಗಳನ್ನು ಮಾತ್ರ ತಿಳಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಮತ್ತೊಂದು ವಿಶೇಷವೆಂದರೆ ಈ ಸಭೆಯಲ್ಲಿ ಜಾತ್ಯಾತೀತವಾಗಿ ಪ್ರಜಾಪ್ರತಿನಿಧಿಯ ಸರ್ವ ಸದಸ್ಯರು ಒಕ್ಕೊರಲಿನಿಂದ ಸಂತಾಪ ಸೂಚಕ ನಿರ್ಣಯದ ಗೌರವ ಸಲ್ಲಿಸಿರುವುದು ಗಮನಾರ್ಹವಾಗಿದೆ.

ಈ ಸಭೆಯು ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರ ಒಂಬತ್ತನೆ ವರ್ಷದ ಆಳ್ವಿಕೆಯ ಅಂದರೆ ೧೯೪೮ನೇ ಇಸವಿ ಮೇ ೨೬ನೆಯ ತಾರೀಖು ಬುಧವಾರ ನಡೆಯಿತು. ಈ ಸಭೆಯು ೧೯೪೦ರ ಮೈಸೂರು ಸರ್ಕಾರದ ಆಕ್ಟಿನ ೧೩(೨)(ಎ) ಪ್ರಕರಣದ ಮೇರೆಗೆ ಪ್ರಜಾಪ್ರತಿನಿಧಿ ಸಭೆಯು ಬೆಂಗಳೂರು ನಗರದ ಕೆ.ಪಿ. ಪುಟ್ಟಣ್ಣಶೆಟ್ಟಿಯವರ ನಗರ ಭವನದಲ್ಲಿ ಮಧ್ಯಾಹ್ನ ೨ ಗಂಟೆಗೆ ಸೇರಿತು. ಈ ಸಭೆಯ ಅಧ್ಯಕ್ಷತೆಯನ್ನು ದಿವಾನ್ ಬಹದ್ದೂರ್ ಸರ್.ಎ. ರಾಮಸ್ವಾಮಿ ಮೊದಲಿಯಾರ್ ಕೆ.ಸಿ.ಎಸ್.ಐ ವಹಿಸಿದ್ದರು. ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಕೆ.ಚಂಗಲರಾಯರೆಡ್ಡಿ ಬಿ.ಎ. ಬಿ.ಎಲ್., ಅವರೂ ಶ್ರೀ ಟಿ.ಮರಿಯಪ್ಪ ಬಿ.ಎ. ಎಲ್.ಎಲ್.ಬಿ. ಶ್ರೀ ಹೆಚ್.ಸಿ. ದಾಸಪ್ಪನವರೂ ಬಿ.ಎ. ಎಲ್.ಎಲ್.ಬಿ. ಕೆ.ಟಿ. ಭಾಷ್ಯಂ ಬಿ.ಎ. ಬಿ.ಎಲ್ ಹೆಚ್.ಸಿದ್ದಯ್ಯ ಬಿ.ಎ. ಎಲ್.ಎಲ್.ಬಿ. ಚೆನ್ನಿಗರಾಮಯ್ಯ ಡಿ.ಹೆಚ್. ಚಂದ್ರಶೇಖರಯ್ಯ ಬಿ.ಎ. ಎಲ್.ಎಲ್.ಬಿ., ಜನಾಬ್ ಮಹಮ್ಮದ್ ಷರೀಫ್ ಬಿ.ಎ. ಎಲ್.ಎಲ್.ಬಿ. ಮತ್ತು ರಾಜಸೇವಾಸಕ್ತ ಪಿ.ಸುಬ್ಬರಾಮಶೆಟ್ಟಿಯವರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡಿದ್ದರು.೧

ಮೊದಲಿಗೆ ಅಧ್ಯಕ್ಷಿಯ ಭಾಷಣ ಮಾಡಿದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ಬಜೆಟ್ ಅಧಿವೇಶನಕ್ಕೆ ಎಲ್ಲರನ್ನೂ ಸ್ವಾಗತಿಸಿ ಪ್ರಾರಂಭದಲ್ಲಿಯೇ ಮಹಾತ್ಮ ಗಾಂಧೀಯವರಿಗೆ ಸಂತಾಪ ಸೂಚಿಸಿದರು. "ಭಾರತೀಯರಲ್ಲಿ ಸರ್ವಶ್ರೇಷ್ಠರೂ, ಒಟ್ಟು ಪ್ರಪಂಚದಲ್ಲೇ ತಮಗೆ ಸಾಟಿಯೆನಿಸಿದವರು ಮತ್ತೊಬ್ಬರಿಲ್ಲದಂಥ ಮಹಾನುಭಾವರೂ ಆಗಿದ್ದ ಮಹಾತ್ಮ ಗಾಂಧಿಯವರು ಐಹಿಕ ಜೀವನವನ್ನೂ ಕೊನೆಗಾಣಿಸಿದ ಕ್ರೂರಕಿಂತಲೂ ಘೋರವಾದುದು, ಅದಕ್ಕಿಂತಲೂ ಹೃದಯವೇದಕವಾದುದೂ ಮತ್ತೊಂದಿಲ್ಲ. ಮಹಾತ್ಮ ಗಾಂಧಿಯವರ ವಿವೇಕ ದೂರದರ್ಶಿತ್ವ ದೇಶದ ಪ್ರಜಾಕೋಟಿಯ ಮನೋಧರ್ಮದ ನಿಷ್ಕÈಷ್ಟ ಜ್ಞಾನ ಜಾತಿ ಮತ ಜನಾಂಗ ಬೇದವನ್ನರಿಯದ ವಿಶ್ವಪ್ರೇಮ ಈ ಅಮೋಘ ಗುಣಗಳ ಅವಲಂಭನವು ನಮ್ಮಲ್ಲಿ ಪ್ರತಿಯೊಬ್ಬರಿಗೂ ಎಷ್ಟರ ಮಟ್ಟಗಿದ್ದು ಎಷ್ಟರಮಟ್ಟಿಗೆ ಮಾರ್ಗದರ್ಶಿಯಾಗಿದ್ದಿತೆಂಬುದನ್ನು ನಮ್ಮಲ್ಲಿ ಪ್ರತಿಯೊಬ್ಬರು ಕೆಲವರು ಪ್ರತ್ಯಕ್ಷವಾಗಿ ಮನಗಂಡೂ ಮತ್ತು ಉಳಿದ ಬಹುಮಂದಿ ಪರೋಕ್ಷವಾಗಿ ಪ್ರೇರಿತರಾಗಿಯೂ ಅರಿತಿದ್ದೆವು. ಮಹಾತ್ಮ ಗಾಂಧಿಯವರು ಕಣ್ಮರೆಯಾದುದಕ್ಕಾಗಿ ಸಮಸ್ತ ಜನಾಂಗಗಳ ಮತ್ತು ಸಮಸ್ತ ದೇಶಗಳ ಜನಗಳೂ ಪಟ್ಟ ದು:ಖವನ್ನು ಮತ್ತು ದಿವಂಗತರಲ್ಲಿ ಅವರಿಗಿರುವ ಗೌರವವನ್ನೂ ನಾನೂ ಕಣ್ಣಾರೆ ಕಂಡವನಾಗಿದ್ದೇನೆ. ಆ ಅನುಭವದಿಂದ ಅವುಗಳನ್ನು ಸೂಚಿಸಬಲ್ಲವನಾಗಿದ್ದೇನೆ. ಈ ಸಭೆಯವರು ಮಹಾತ್ಮ ಗಾಂಧಿಯವರ ದಾರುಣ ಮರಣಕ್ಕಾಗಿ ತಮ್ಮ ಗಾಢ ಸಂತಾಪವನ್ನು, ಯಾರ ದೇಹವು ನಮ್ಮ ಕಣ್ಮರೆಯಾಗಿದ್ದರು ಯಾರ ಅಂತರಾತ್ಮದ ತೇಜಸ್ಸು ಮತ್ತು ಪ್ರಭಾವವನ್ನು ನಮ್ಮ ಕಾರ್ಯಕಲಾಪಗಳೆಲ್ಲವನ್ನೂ ಕೃಪಾದೃಷ್ಟಿಯಿಂದ ಬೆಳಗಿ ಸತ್ಪರಿಣಾಮವನ್ನುಂಟುಮಾಡುವುದೋ ಆ ದಿವ್ಯ ಮೂರ್ತಿ ಮಹಾತ್ಮಾ ಗಾಂಧಿಯವರ ವಿಷಯದಲ್ಲಿ ತಮ್ಮ ಪ್ರೇಮ ಗೌರವಗಳನ್ನು ಸೂಚಿಸಲೂ ಈ ಅಧಿವೇಶನದಲ್ಲಿ ಅವಕಾಶ ದೊರೆಯುವುದಾಗಿದೆ."೨

ಶ್ರೀ ಕೆ ಹನುಮಂತಯ್ಯನವರು(ಬೆAಗಳೂರು ಸಿಟಿ ಮುನಿಸಿಪಾಲಿಟಿ) ಅಧ್ಯಕ್ಷರೇ..ಈ ದಿವಸ ನಾನು ಒಂದು ಪವಿತ್ರ ಕರ್ತವ್ಯವನ್ನು ಮಾಡಬೇಕಾಗಿದೆ. ಅದು ಈ ಸಭೆಯ ಮುಂದೆ ಈ ಸಂತಾಪ ಸೂಚಕ ನಿರ್ಣಯವನ್ನು ಇಡತಕ್ಕದಾಗಿದೆ. ಈ ನಿರ್ಣಯವು ಈ ರೀತಿ ಇದೆ. "ಕಳೆದ ಮೂವತ್ತು ವರ್ಷಗಳಿಂದ ರಾಷ್ಟ್ರದ ಜನಜೀವನದ ಸೂತ್ರವನ್ನು ವಹಿಸಿಕೊಂಡು ಶತಮಾನಗಳಿಂದ ದಾಸ್ಯದಲ್ಲಿ ಮುಳುಗಿ ತೊಳಲುತ್ತಿದ್ದ ಭಾರತದ ಜನತೆಗೆ ಒಂದು ನವಚೈತನ್ಯವನ್ನು ಕೊಟ್ಟು ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದ ಭಾರತದ ಸ್ವಾತಂತ್ರ್ಯವನ್ನು ಸಾಧಿಸಿದ ರಾಷ್ಟ್ರಪಿತ ಪೂಜ್ಯ ಮಹಾತ್ಮಾ ಗಾಂಧೀಯವರ ನಿಧನಕ್ಕಾಗಿ ಈ ಸಭೆಯು ತನ್ನ ಭಕ್ತಿಪೂರಕವಾದ ಶೋಕವನ್ನು ವ್ಯಕ್ತಪಡಿಸುತ್ತದೆ.೩ ಮುಂದುವರೆಸುತ್ತಾ....ಮಹಾತ್ಮ ಗಾಂಧೀಯವರು ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿದ್ದು ಕೂಡ ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ. ಇದು ಪ್ರಪಂಚಕ್ಕೆ ಹೊಸ ವಿಧಾನ ಸತ್ಯ ಮತ್ತು ಅಹಿಂಸೆಯನ್ನು ಹಿಂದೆ ಏಸುಕ್ರಿಸ್ತ ಮತ್ತು ಬುದ್ಧದೇವ ಪ್ರಪಂಚದಲ್ಲಿ ಬಿತ್ತಿ ಅನೇಕ ಶತಮಾನಗಳ ಕಾಲ ಸುಖಶಾಂತಿ ಸ್ಥಾಪಿಸಿದ್ದರು. ಅದು ಮಲೀನವಾಗುತ್ತಾ ಬಂದದ್ದರಿAದ ದೇವರು ಮತ್ತೆ ದೇವರು ಮಹಾತ್ಮನನ್ನು ಸತ್ಯಶಾಂತಿಗಳ ಸ್ಥಾಪನೆಯ ಸಲುವಾಗಿ ಸೃಷ್ಟಿಸಿದನೆಂದು ಕಾಣುತ್ತದೆ. ಜನವರಿ ೩೦ನೇ ತಾರೀಖು ಮಹಾತ್ಮರು ಗುಂಡೇಟಿಗೆ ಬಲಿಯಾದಾಗ ಮೈಸೂರಿನ ಪ್ರಮುಖರಾದ ಶ್ರೀಮಾನ್ ದಾಸಪ್ಪನವರು (ಮಹಾತ್ಮರ ಭಕ್ತರು) ಶ್ರೀಮಾನ್ ಸಿದ್ದಯ್ಯನವರು ಮತ್ತು ಶ್ರೀ ಮರಿಯಪ್ಪನವರು ಬಿರ್ಲಭವನದಲ್ಲಿದ್ದರು. ಆ ಮರಣಮುಖರಾಗಿದ್ದ ಮಹಾತ್ಮರನ್ನು ದರ್ಶನ ಮಾಡುವ ಸೌಭಾಗ್ಯ ಇವರಿಗೆ ದೊರಕಿತು. ಮಹಾತ್ಮರಿಗೆ ಆಗ ತಾನೆ ಗುಂಡೇಟು ಬಿದ್ದಿದ್ದು ಇನ್ನೂ ಮೈ ಬಿಸಿಯಾಗಿತ್ತು. ದಾಸಪ್ಪನವರ ಕೈಯಿಂದಲೇ ನೀರನ್ನು ಆ ಅಂತ್ಯಕಾಲದಲ್ಲಿ ಮಹಾತ್ಮ ಗಾಂಧೀಯವರು ಕುಡಿದರು. ಈ ಪುಣ್ಯ ನಮ್ಮ ಮೈಸೂರಿಗೆ ದೊರೆತ್ತಿದ್ದು ನಮ್ಮ ಪುಣ್ಯ ಎಂದು ಭಾವಿಸುತ್ತೇನೆ. ಗಾಂಧಿಯವರ ಉಪದೇಶವನ್ನು ಅನುಸರಿಸಿ ಮಾನವಕಲ್ಯಾಣವನ್ನು ಸಾಧಿಸೋಣ. ಈ ಗುರುತರ ಭಾವನೆಯಿಂದ ಈ ನಿರ್ಣಯವನ್ನು ಅಂಗೀಕರಿಸಬೇಕೆAದು ನಾನು ಬೇಡುತ್ತೆನೆ."೪

ಶ್ರೀಮತಿ ಸುನಂದಮ್ಮನವರು(ಮೈಸೂರು ಸ್ತಿçರಯರು)ಅಧ್ಯಕ್ಷರೇ...ಈ ನಿರ್ಣಯವನ್ನು ಪುಷ್ಠೀಕರಿಸುತ್ತಾ ಒಂದೆರೆಡು ಮಾತುಗಳನ್ನು ಮಾತ್ರ ಹೇಳಲಿಚ್ಚಿಸುತ್ತೇನೆ. "ಪಾಶ್ಚಿಮಾತ್ಯರು ತೋರ್ಪಡಿಸಿದ ಸಂಕುಚಿತ ಭಾವನೆಯಿಂದಲೇ ನಮ್ಮ ದೇಶದ ಹೆಣ್ಣು ಮಕ್ಕಳು ಹಿಂದೂ ಸಮಾಜದಲ್ಲಿ ಹೊರಗೆಬಾರದಂತೆ ಆಗಿ ಬೂದಿಯಲ್ಲಿ ಮುಚ್ಚಿದ ಕೆಂಡದAತೆ ಮನೆಯೊಳಗೆ ಹುದುಗಿ ಕೊಂಡಿದ್ದು ತಮ್ಮ ಶಕ್ತಿ ಸಾಮರ್ಥ್ಯಗಳ ಯೋಗ್ಯತೆಗಳನೆನಲ್ಲಾ ಕಳೆದುಕೊಂಡು ನಿರ್ವೀಯರಂತಿದ್ದ ಕಾಲದಲ್ಲಿ ಪೂಜ್ಯ ಬಾಪೂಜಿಯವರು ನಮ್ಮ ಸ್ತಿçರಯರ ಶಕ್ತಿ ಸಾಮರ್ಥ್ಯಗಳೆನೆಂದು ತೋರಿಸಿಕೊಟ್ಟರು. ಅವರ ಧರ್ಮಪತ್ನಿ ಕಸ್ತೂರಿಬಾ ಗಾಂಧೀಯವರು ಯಾವಾಗ ಸ್ತಿçರಯರೆಚ್ಚರಿಸಿದರೋ ಆಗಿನಿಂದ ನಮ್ಮ ಹೆಣ್ಣು ಮಕ್ಕಳು ತಮ್ಮ ಶಕ್ತಿ ಸಾಮರ್ಥ್ಯ ಬುದ್ಧಿ, ಕುಶಲತೆಗಳನ್ನು ತೋರ್ಪಡಿಸಿ ತಮ್ಮ ಅಣ್ಣತಮ್ಮಂದಿರಿಗೆ ನೆರವಾಗತಕ್ಕ ಅವಕಾಶ ದೊರಕಿತು. ಇವರ ನಿಧನದಿಂದ ನಮಗೆ ಅಂದರೆ ಹೆಂಗಸರಿಗೆ ಹೆಚ್ಚಿನ ನಷ್ಟವಾಗಿದೆಯೆಂದು ಹೇಳಬೇಕಾಗಿದೆ. ಏಕೆಂದರೆ ಇನ್ನೂ ಹೆಣ್ಣು ಮಕ್ಕಳಿಗೆ ನಮ್ಮ ಸಮಾಜದಲ್ಲಾಗಲಿ, ರಾಜಕೀಯದಲ್ಲಾಗಲಿ ಅಷ್ಟೇಕೆ ಇಡೀ ದೇಶದಲ್ಲಿ ಅನೇಕ ವಿಚಾರದಲ್ಲಿ ಸರಿಯಾದ ಸ್ಥಾನಮಾನ ದೊರೆತಿಲ್ಲ."೫

ಶ್ರೀ ಜಾತರೆ ನಾಯಕರು(ನಿಮ್ನ ಪಂಗಡ) ಅಧ್ಯಕ್ಷರೇ...ಈಗ ಸೂಚಿಸಿದ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ನಮ್ಮ ಭಾರತದಲ್ಲಿ ಮಹಾತ್ಮಾ ಗಾಂಧೀಯವರು ಜನಿಸುವುದಕ್ಕೆ ಮೊದಲು ನಮ್ಮ ಭಾರತ ಮಾತೆ ಅಂಧಕಾರದಲ್ಲಿದ್ದಳು. ಈ ಮಾತೆಯ ವೀರಪುತ್ರರ ವೀರತ್ವ ಅಳಿಸಿಹೋಗಿತ್ತು. ಭಾರತಿಯರ ಉನ್ನತಿ

ಇಳಿದುಹೋಗಿತ್ತು. ಭಾರತವು ಇದಕ್ಕೆ ಮೊದಲು ಪಡಬಾರದ ಅನೇಕಾನೇಕಾ ಕಷ್ಟಪರಂಪರೆಗಳನ್ನುಭವಿಸಿ ಪರಾಧೀನತೆಯಲ್ಲಿತ್ತು. ಈ ರೀತಿ ಪರಾಧೀನತೆಯಲ್ಲಿದ್ದ ಭಾರತಮಾತೆಗೆ ಮಹಾತ್ಮಾ ಗಾಂಧೀಯವರು ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟರು. ಭರತಖಂಡದಲ್ಲಿ ನಾನಾ ಕೋಮುಗಳಲ್ಲಿ ಕೀಳುಮೇಲೆಂಬ ಭಾವನೆಗಳೂ ತುಂಬಿ ತುಳುಕಾಡುತ್ತಿದ್ದವು. ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುತ್ತಿರಲಿಲ್ಲ. ಒಂದು ಕೋಮಿನವರು ಮತ್ತೊಂದು ಕೋಮಿನವರನ್ನು ದೂರ ದೂರವಾಗಿ ತಳ್ಳುತ್ತಿದ್ದರು. ಖಂಡಿತವಾಗಿ ಮಹಾತ್ಮಾ ಗಾಂಧೀಯವರು ನಮ್ಮ ಭಾರತ ದೇಶದಲ್ಲಿ ಜನ್ಮವೆತ್ತದೇ ಇದ್ದಿದ್ದರೇ ಅನೇಕ ಸಹಸ್ರ ವರ್ಷಗಳಾದರೂ ನಮ್ಮ ದೇಶದಲ್ಲಿ ಖಂಡಿತವಾಗಿಯೂ ಈ ರೀತಿ ಒಗ್ಗಟ್ಟು ಹುಟ್ಟುತ್ತಿರಲಿಲ್ಲವೆಂದು ನಮ್ಮ ಅನುಭವದಿಂದ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ತುಂಬಿದ್ದ ಇಂತಹ ಸೂತಕವನ್ನು, ಕೊಳಕನ್ನು ಉಚ್ಚ ನೀಚವೆಂಬ ಮನೋಭಾವವನ್ನು ತೊಲಗಿಸಿ ಶುದ್ಧಿಕರಿಸಿ ಮಹಾತ್ಮಾ ಗಾಂಧೀಯವರು ತಮ್ಮ ಆತ್ಮ ಶಕ್ತಿಯಿಂದ ನಮ್ಮ ಜನರನ್ನು ಒಗ್ಗೂಡಿಸಿದ್ದಾರೆ. ೧೯೨೪ರ ಬೆಳಗಾಂ ಕಾಂಗ್ರೇಸ್ ನಲ್ಲಿ ನಾನು ಭಾಗವಹಿಸಿದ್ದೇ ಆ ಮಹಾತ್ಮರ ಪ್ರೋತ್ಸಾಹದಿಂದಲೇ ಅವರ ತತ್ವಬೋಧನೆಯಿಂದಲೇ ಸಮಾಜ ಸುಧಾರಣೆ ಹೇಗೆ ಆಗಬೇಕೆಂದು ಬೆಳಕಿಗೆ ಬಂದಿದ್ದು. ನಾವು ಸಹ ನಮ್ಮ ಅಲ್ಪ ಸೇವೆಯನ್ನು ಮಾಡಿ ನಮ್ಮ ಕಷ್ಟಸುಖಗಳೇನೆಂಬುದನ್ನು ಸರ್ಕಾರದಲ್ಲಿ ಹೇಳಿಕೊಳ್ಳಲು ದಾರಿ ತೋರಿಸಿಕೊಟ್ಟವರು ಈ ಮಹಾತ್ಮರೇ.೬

ಶ್ರೀ ವೈ. ಧರ್ಮಪ್ಪನವರು(ಮಂಜರಾಬಾದು ತಾಲ್ಲೂಕು) "ಮಹಾತ್ಮಾ ಗಾಂಧೀಯವರ ಆದರ್ಶಗಳಿಂದ ನಮ್ಮ ದೇಶ ಅಗ್ರಸ್ಥಾನವನ್ನು ಪಡೆದಿದೆ. ಈ ಆದರ್ಶ ತತ್ವಗಳು ನಮ್ಮ ಮೈಸೂರು ಮತ್ತು ಇಂಡಿಯಾದೇಶಕ್ಕೆ ಅಲ್ಲದೆ ಪ್ರಪಂಚಕ್ಕೆ ಮಾದರಿಯಾಗಿ ನಿಂತು ಭಾರತವನ್ನು ದಾಸ್ಯಶೃಂಖಲೆಯಿAದ ವಿದ್ಯುಕ್ತವಾಗುವಂತೆ ಮಾಡಿದೆ. ಇಂತಹ ಪೂಜ್ಯರ ತತ್ವಗಳನ್ನು, ಉದಾತ್ತ ಧ್ಯೆಯವನ್ನೂ ಪ್ರತಿಯೊಬ್ಬ ಪ್ರಜೆಯು ಅನುಷ್ಟಾನಕ್ಕೆ ತಂದು ಅವರಿಗೆ ಗೌರವ ಸಲ್ಲಿಸಬೇಕಾದುದು ಅಗತ್ಯ. ಈ ಪೂಜ್ಯರು ರಾಜಕೀಯತಜ್ಞರು ಮತ್ತು ಮಾನವಶ್ರೇಷ್ಟರು. ತಮ್ಮ ಆದರ್ಶಗಳನ್ನು ಇಂಡಿಯಾ ದೇಶಕ್ಕೆ ಅಲ್ಲದೆ ಎಲ್ಲಾ ದೇಶಗಳಿಗೂ ಹರಡಿ ಎಲ್ಲಾ ಕಡೆಯು ಶಾಂತಿ ನೆಲಸುವಂತೆ ಮಾಡಿದುದು ಈ ಪೂಜ್ಯ ವ್ಯಕ್ತಿಗೆ ಸೇರಿದ್ದು, ಆದುದರಿಂದ ಪ್ರತಿಯೊಬ್ಬರು ಇವರಿಗೆ ಗೌರವ ಸಲ್ಲಿಸುವುದು ಅವಶ್ಯಕ."

ಶ್ರೀ ಎಸ್ ಮಲ್ಲಯ್ಯನವರು(ಮದ್ದೂರು ತಾಲೂಕು) "ಪ್ರತಿ ಭಾರತಪುತ್ರನೂ ಪೂಜ್ಯ ಬಾಪೂಜಿಯವರಿಗೆ ಗೌರವವನ್ನು ಸಲ್ಲಿಸಬೇಕಾದರೆ ಅವರು ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಸರಿಸಿ ಅವರ ಉಪದೇಶಗಳಂತೆ ಕಾರ್ಯತಃ ನಡೆದುತೋರಿಸಬೇಕು. ಆ ಮಹಾತ್ಮರ ಆದರ್ಶ ಮತ್ತು ಆತ್ಮಶಕ್ತಿಯನ್ನು ಇಡೀ ಪ್ರಪಂಚಕ್ಕೆ ತೋರಿಸುವ ಶಕ್ತಿಯನ್ನು ಇಡೀ ಪ್ರಪಂಚಕ್ಕೆ ತೋರಿಸಿವ ಶಕ್ತಿಯನ್ನು ನಮಗೆ ಭಗವಂತನು ಅನುಗ್ರಹಿಸಲೆಂದು ಬೇಡಿ ಪೂಜ್ಯ ಬಾಪೂಜಿಯವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ."

ಶ್ರೀ ಭೂಪಾಳಂ ಆರ್ ಚಂದ್ರಶೇಖರಯ್ಯನವರು(ವ್ಯಾಪಾರ ಮತ್ತು ವಾಣಿಜ್ಯ) "ಅಧ್ಯಕ್ಷ ಮಹಾಶಯ, ಪರಮಪುರುಷರು ಪೂಜ್ಯರು ಐವತ್ತು ಶತಮಾನಗಳಿಂದ ನಡೆದುಕೊಂಡುಬAದಿರತಕ್ಕ ಭಾರತೀಯ ಸಂಸ್ಕÈತಿಯ ದೇಗುಲದ ಚಿನ್ನದ ಕಳಶದೋಪಾದಿಯಲ್ಲೂ ಇದ್ದ ಮಹಾತ್ಮಾ ಗಾಂಧೀಯವರ ಮರಣಕ್ಕಾಗಿ ಅನುತಾಪ ಸೂಚಿಸುವುದರಲ್ಲಿ ನಾನು ಭಾಗಿಯಾಗುತ್ತೇನೆ. ಇದು ಕೆಲವು ಕಾಲ ಅಲೌಕಿಕ ದೃಶ್ಯವಾಘಿ ಪರಿಣಮಿಸಿತು. ಪ್ರತಿದಿನವೂ ಸಂಜೆ ಐದು ಗಂಟೆ ಹೊತ್ತಿಗೆ ಪ್ರಪಂಚದ ನಾನಾ ರಾಷ್ಟ್ರಗಳ ಪ್ರಮುಖರ ಕಿವಿಗಳು ರೇಡಿಯೋಗಳ ಬಳಿಗೆ ಹೋಗಿ ಮಹಾತ್ಮರು ಹೇಳತಕ್ಕ ಪವಿತ್ರ ಮಾತುಗಳಲ್ಲಿ ಕೇಂದ್ರಿಕೃತವಾಗುತ್ತಿದ್ದವು. ಇಂತಹ ಮಹಾಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ."೭

ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರು(ನಿಯಮಿತ ಸದಸ್ಯರು) "ಭಾರತದ ಸೇವೆಗಾಗಿ ಇನ್ನೂ ಅನೇಕ ಕಾಲ ೧೨೫ ವರ್ಷ ಬದುಕಿ ಅನೇಕ ಮಂಗಳಕರವಾದ ಕೆಲಸಗಳನ್ನು ಮಾಡುತ್ತೇನೆಂದು ಆಶಿಸುತ್ತಿದ್ದ ಆ ಘನವ್ಯಕ್ತಿಯು ಆಕಸ್ಮಾತಾಗಿ ನಮ್ಮೆಲ್ಲರನ್ನು ಬಿಟ್ಟು ಕಣ್ಮರೆಯಾಗಿರುವುದು ಭಾರತಕ್ಕೆ ಅಲ್ಲದೆ ಇಡೀ ಜಗತ್ತಿನ ಪ್ರಜಾಕೋಟಿಗೆ ಅಪಾರ ನಷ್ಟವುಂಟಾಗಿದೆ. ಇದರ ವಿಚಾರದಲ್ಲಿ ಅನೇಕರಿಗೆ ಅನೇಕ ವಿಧವಾದ ವಿಚಾರಗಳೂ ಅಪೂರ್ವವಾಗಿ ತೋರಿಬಂದು ಆ ಘನವ್ಯಕ್ತಿಯು ಪ್ರತಿಯೊಬ್ಬರ ಸ್ಮರಣೆಗೆ ಬರಲೂ ಆಸ್ಪದವಾಗಿದೆ. ಒಂದು ವಿಚಾರವಲ್ಲ, ಎರಡು ವಿಚಾರವಲ್ಲ, ಹೆಂಗಸರಲ್ಲಿ ಗಂಡಸರಲ್ಲಿ ಮಕ್ಕಳಲ್ಲಿ ಪ್ರಾಣಿಗಳಲ್ಲಿ ಎಲ್ಲಾ ವಿಚಾರದಲ್ಲೂ ಒಂದು ದೊಡ್ಡ ವಚನವನ್ನು ಹೇಳಿ, ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಿದ್ದ ಮಹಾವ್ಯಕ್ತಿಯೆಂದರೆ ನಮ್ಮ ಬಾಪೂಜಿಯವರು"೮

ಶ್ರೀ ಬಿ.ಎ. ಶಿವಲಿಂಗಪ್ಪನವರು(ಹೋಳಲ್ಕೆರೆ ತಾ.) " ಮಹಾತ್ಮರ ಜೀವನದ ರಹಸ್ಯವು ಅದರ ಈ ತರಹ ವಿಶೇಷ ಗುಣಗಳಿಂದ ಹೊರಪಡುವುದು ಬುದ್ಧ ಭಗವಾನ್, ಏಸುಕ್ರಿಸ್ತ, ಮಹಮ್ಮದ್ ಪೈಗಂಬರ್ ಮತ್ತು ಶ್ರೀ ಬಸವಣ್ಣನವರ ಜೀವನದಲ್ಲಿಯೂ ಮಹತ್ವ ಗುಣಗಳು ಕಂಡುಬAದಿವೆ. ಮಹಾತ್ಮಜೀಯವರ ಸತ್ಯ ಮತ್ತು ಅಹಿಂಸಾ ಮಾರ್ಗವೂ ಇಡೀ ಭಾರತದ ೪೦ ಕೋಟಿ ಪ್ರಜೆಗಳ ಅಂತರAಗ ಮತ್ತು ಬಹಿರಂಗ ಶುದ್ಧಿಗೆ ಬಹುಮಟ್ಟಿಗೆ ಸಾದಕವಾಗಿ ಅದರ ಫಲವಾಗಿ ನಮಗೆ ಇಂದು ದೊರೆತಿರುವ ಸ್ವಾತಂತ್ರ್ಯದ ಆನಂದವನ್ನು ಪಡೆಯಲೂ ಅವರು ನಮ್ಮ ನಡುವೆ ಇಲ್ಲವಲ್ಲ ಎಂದು ಪರಿತಪಿಸಬೇಕಾಗಿದೆ. "೯

ಶ್ರೀ ಎಂ.ಸಿ. ಚಲುವಯ್ಯನವರು(ಮಂಡ್ಯ ತಾ.) "ನಮ್ಮ ಈ ಭಾರತ ದೇಶದಲ್ಲಿ ಶ್ರೀ ರಾಮ, ಶ್ರೀ ಕೃಷ್ಣರಂಥವರು ಹುಟ್ಟಿ ದೀನರನ್ನು ಉದ್ಧಾರ ಮಾಡಿದ್ದಾರೆ. ಶ್ರೀ ಕೃಷ್ಣನು ಗೊಲ್ಲರ ಮನೆಯಲ್ಲಿ ಬೆಳೆದು ಅವರನ್ನು ಉದ್ಧಾರ ಮಾಡಿದ್ದು ಎಲ್ಲರಿಗೂ ತಿಳಿಯದೇ ಇಲ್ಲ. ಹಾಗೇಯೆ ನರಕದಲ್ಲಿ ಬಿದ್ದು ನರಳುತ್ತಿದ್ದ ಈ ಹರಿಜನರನ್ನು ಎತ್ತಿ ಸ್ವರ್ಗಕ್ಕೆ ತಂದವರು ಈ ಮಹಾತ್ಮರು. ಎಷ್ಟೋ ವೇಳೆ ಆಸ್ಪತ್ರೆಗಳಲ್ಲಿ ಖಾಯಂಯಿAದ ನರಳುತ್ತ ಬಿದ್ದಿದ್ದ ನಮ್ಮ ಜನಾಂಗದವರನ್ನು ತಮ್ಮ ಕೈಯಿಂದ ಔಷದಿ ಕೊಟ್ಟು ಕಾಪಾಡಿದ್ದಾರೆ. ಅವರ ಆ ತತ್ವ ಮತ್ತು ಧ್ಯೇಯಗಳನ್ನು ಅವರ ಅನುಯಾಯಿಗಳು ಮುಂದೆಯೂ ಅನುಸರಿಸಬೇಕೆಂದು ಪ್ರಾರ್ಥಿಸುತ್ತೇನೆ."

ಶ್ರೀ ಎಂ ಶಂಕರಲಿAಗೇಗೌಡರು(ನಾಗವ ತಾ) ನಾನು ಅವರ ಆತ್ಮಕ್ಕೆ ಶಾಂತಿ ಆಗಲಿ ಎಂಬ ದೃಷ್ಟಿಯಿಂದ ಅನೇಕ ವಿಧವಾಗಿ ಕೇಳಿಕೊಳ್ಳುತ್ತೇನೆ. ಅವರನ್ನು ಈ ಮೈಸೂರು ದೇಶದ ೭೦ ಲಕ್ಷ ಪ್ರಜೆಗಳೂ ಸಹ ಅನೇಕ ವಿಧವಾಗಿ ಹೊಗಳಿದ್ದಾರೆ. ಅವರಿಗೆ ದೇಶದ ರಾಜಋಷಿಯೆಂಬ ಗೌರವವನ್ನು ಸಲ್ಲಿಸಿದ್ದಾರೆ.ಇಂತಹ ಗೌರವ ಇರುವುದರಿಂದ ಅವರ ಆತ್ಮಕ್ಕೆ ಶಾಂತಿಯುAಟಾಗಲೆAದು ಹೇಳುವುದಲ್ಲದೆ ಈ ನಿರ್ಣಯಕ್ಕೆ ಖಂಡಿತವಾಗಿಯೂ ಬೆಂಬಲಿಸುತ್ತೆನೆ.೧೦

ಶ್ರೀ ಡಿ.ಗೋವಿಂದದಾಸರು(ಬೇಲೂರು ತಾ) "ಸಾವಿರ ವರ್ಷಗಳ ಹಿಂದೆ ಹರಿಜನರು ಉದ್ಧಾರಕ್ಕಾಗಿ ಶ್ರೀರಾಮನುಜಾಚಾರ್ಯರು ದುಡಿದು ಅವರನ್ನು ಸ್ವಲ್ಪ ದೂರ ಮುಂದಕ್ಕೆ ನೂಕಿದರು. ಅನಂತರ ೮೦೦ ವರ್ಷದ ಹಿಂದೆ ಬಸವಣ್ಣವನರು ಹರಿಜನೋದ್ಧಾರ ಕಾರ್ಯವನ್ನು ಕೈಗೊಂಡು ಅವರನ್ನು ಮತ್ತಷ್ಟು ದೂರ ದೂಕಿದರು. ೩೦-೪೦ ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ಹರಿಜನ ಉದ್ಧಾರಕ್ಕಾಗಿ ಕೈಹಾಕಿ ಹರಿಜನರನ್ನು ಈಗ ನಡುಮಧ್ಯೆ ಬಿಟ್ಟಿದ್ದಾರೆ. ಹಿಂದೂಗಳೂ ಹರಿಜನೋದ್ಧಾರಕ್ಕಾಗಿ ಎಷ್ಟರಮಟ್ಟಿಗೆ ಕೆಲಸಮಾಡಬೇಕೆಂಬುದನ್ನು ಮತ್ತು ಗೋಚರ ಮಾಡಿದ ಭಾರತಕ್ಕೆಲ್ಲಾ ಹರಿಜನರು ಹಿಂದೂಗಳೇAದೆ ಪೂಜ್ಯ ಬಾಪೂಜಿಯವರು ಚೆನ್ನಾಗಿ ಮನದಟ್ಟುಮಾಡಿದ್ದಾರೆ...."

ಜನಾಬ್ ಟಿ.ಎಂ.ಸಾಬ್ಜುಸಾಬ್ ರವರು(ಕಡೂರು,ತರಿಕೇರೆ,ಕೊಪ್ಪ,ನರಸಿಂಹರಾಜಪುರ,ಶೃAಗೇರಿ ಮುಸ್ಲಿಂ)"ಮಹಾತ್ಮ ಗಾಂಧಿಯವರ ಮರಣವೂ ವೀರಮರಣವೇ, ವೀರರ ಮರಣವೂ ಇದೇ ರೀತಿ ಆಗುತ್ತದೆ. ಏಕೆಂದರೆ ದೇಶಸೇವೆಯೇ ಆಗಲಿ, ಯಾವ ಸೇವೆಯೇ ಆಗಲಿ ವೀರರು ತಮ್ಮ ಜೀವನವನ್ನು ತಮ್ಮ ಅಂಗೈನಲ್ಲಿಟ್ಟುಕೊAಡು ಅದನ್ನು ನೆರವೆರಿಸುತ್ತಾರೆ. ಅದರಂತೆ ಮಹಾತ್ಮಜಿಯವರು ಸರ್ವಸ್ವವನ್ನು ತ್ಯಾಗ ಮಾಡಿ ಶಾಂತಿ, ಸತ್ಯ, ಅಹಿಂಸೆ ಎಂಬ ಆಯುಧದಿಂದಲ್ಲದೇ ಬೇರೆ ಯಾವ ಆಯುಧದಿಂದಲೂ ಜಗತ್ತು ಮುಂದಕ್ಕೆ ಬರಲು ಸಾದ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆಟಂ ಬಾಂಬ್ ಆಗಲೀ, ಪ್ಯಾರಾಚ್ಯೂಟ್ ಆಗಲಿ ಅಥವಾ ಬೇರೆ ಯಾವ ಆಯುಧವೇ ಆಗಲಿ ಈ ಆಯುಧದ ಮುಂದೆ ಕೆಲಸಮಾಡಲಾರದೆಂದು ನಿರ್ಧರಿಸಿದ್ದಾರೆ."೧೧

**References**


1. ಮೈಸೂರು ಪ್ರಜಾಪ್ರತಿನಿದಿ ಸಭೆ-ಸಂಪುಟ-೯೭ ಸಂಚಿಕೆ-೦೧ ಪುಟ-೦೧
2. ಅದೇ ಪುಟ-೦೨
3. ಅದೇ ಪುಟ-೧೦
4. ಅದೇ ಪುಟ-೧೧
5. ಅದೇ ಪುಟ-೧೨
6. ಅದೇ ಪುಟ-೧೩
7. ಅದೇ ಪುಟ-೧೪
8. ಅದೇ ಪುಟ-೧೬
9. ಅದೇ ಪುಟ-೧೬
10. ಅದೇ ಪುಟ-೧೬
11. ಅದೇ ಪುಟ- ೧೭